## ಮುನ್ನುಡಿ

ಮಕ್ಕಳ ಸಮಗ್ರ ಬೆಳವಣಿಗೆಯಲ್ಲಿ ಕೌಶಲಗಳು ಹಾಗೂ ಮೌಲ್ಯಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಇವುಗಳನ್ನು ಶಾಲಾ ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಮೈಗೂಡಿಸಿಕೊಳ್ಳಲು ಅವಕಾಶ ನೀಡಿದಲ್ಲಿ ಉತ್ತಮ ನಾಗರಿಕರಾಗಲು ಸಹಾಯವಾಗುತ್ತದೆ. ಇಂತಹ ಅವಕಾಶಗಳನ್ನು ಮಕ್ಕಳಿಗೆ ಕಲ್ಪಿಸಲು ಹಾಗೂ ಮಕ್ಕಳಿಗೆ ಶಾಲೆಯ ಹೊರಗಿನ ಚಟುವಟಿಕೆಗಳ ಅನುಭವ ಒದಗಿಸಲು ವರ್ಷದಲ್ಲಿ 10 ದಿನಗಳು ಬ್ಯಾಗ್ ರಹಿತ ದಿನವನ್ನು ಆಚರಿಸಲು ನೂತನ ರಾಷ್ಟ್ರೀಯ ಶಿಕ್ಷಣ ನೀತಿ-2020 ಶಿಫಾರಸ್ಸು ಮಾಡಿದೆ. ಇದರನ್ವಯ ಮಕ್ಕಳಿಂದಲೇ ಮಕ್ಕಳಿಗಾಗಿ ರೂಪಿಸಿರುವ ಕಾರ್ಯಕ್ರಮ "ಸಂಭ್ರಮ ಶನಿವಾರ"-ಬ್ಯಾಗ್ ರಹಿತ ದಿನ-ವನ್ನು 2020-21 ನೇ ಸಾಲಿನಿಂದ ಕರ್ನಾಟಕ ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ತಿಂಗಳಿಗೆ ಒಂದು ಶನಿವಾರದಂದು ಆಚರಿಸಲು ನಿರ್ಧರಿಸಲಾಗಿತ್ತು. ಆದರೆ ಮಹಾಮಾರಿ ಕೋವಿಡ್ ಸೋಂಕಿನ ಹರಡುವಿಕೆಯಿಂದ ಈ ಕಾರ್ಯಕ್ರಮವನ್ನು 1 ರಿಂದ 8 ನೇ ತರಗತಿ ಮಕ್ಕಳಿಗೆ 2021-2022 ಸಾಲಿನಿಂದ ಅಳವಡಿಸಲಾಗುವುದು.

ಸಂಭ್ರಮ ಶನಿವಾರದಂದು ಯಾವುದೇ ಪುಸ್ತಕ, ನೋಟ್‌ಪುಸ್ತಕ, ಬ್ಯಾಗ್ ಇಲ್ಲದೆ ಮಕ್ಕಳು ಶಾಲೆಗೆ ಬರುತ್ತಾರೆ. ಸಂತಸದ ಕಲಿಕೆಯ ಮೂಲಕ ಚಟುವಟಿಕೆ ಆಧಾರಿತ ಕಲಿಕೆಯನ್ನು ಪ್ರೋತ್ಸಾಹಿಸಲು ಆರೋಗ್ಯಕರ ಜೀವನಶೈಲಿ, ಸ್ವಾಸ್ಥ್ಯ ಮತ್ತು ಶುಚಿತ್ವ, ನಾಗರಿಕ ಸೌಲಭ್ಯಗಳು ಇತ್ಯಾದಿಯಂತಹ 10 ವಿಷಯಗಳಲ್ಲಿ ಮಕ್ಕಳಿಗಾಗಿ ವಿದ್ಯಾರ್ಥಿ ಕೈಪಿಡಿಗಳನ್ನು ಹಾಗೂ ಸಂಭ್ರಮ ಶನಿವಾರ ಕಾರ್ಯಕ್ರಮವನ್ನು ಹೇಗೆ ಅಳವಡಿಸಬೇಕು ಎಂಬ ಮಾರ್ಗಸೂಚಿಗಳನ್ನೊಳಗೊಂಡ ಶಿಕ್ಷಕರ ಕೈಪಿಡಿಯನ್ನು ಶಿಕ್ಷಕರಿಂದಲೇ ರಚಿಸಲ್ಪಟ್ಟಿದೆ. ವಿದ್ಯಾರ್ಥಿ ಕೈಪಿಡಿಯಲ್ಲಿ ವಿಷಯವನ್ನು ಆಳವಾಗಿ ಅರ್ಥೈಸಲು ಅರಿವು, ಅನುಭವ ಮತ್ತು ಅವಲೋಕನ ಎಂಬ ಮೂರು ಹಂತಗಳಲ್ಲಿ ವಿದ್ಯಾರ್ಥಿಗಳೇ ಸ್ವಂತವಾಗಿ ಕೈಗೊಳ್ಳಬಹುದಾದ ಚಟುವಟಿಕೆಗಳನ್ನು ನೀಡಿದೆ. ಕಾರ್ಯಕ್ರಮ ಪ್ರಾರಂಭಿಸುವ ಮುನ್ನ ಶಿಕ್ಷಕರು ಶಿಕ್ಷಕರ ಕೈಪಿಡಿಯನ್ನು ಸಂಪೂರ್ಣವಾಗಿ ಓದಿ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದು.

ವಿದ್ಯಾರ್ಥಿ ಕೈಪಿಡಿಗಳು ಹಾಗೂ ಶಿಕ್ಷಕರ ಕೈಪಿಡಿಗಳ ರಚನೆಯಲ್ಲಿ ಸಹಕರಿಸಿದ ಅಜೀಂ ಪ್ರೇಂ ಜೀ ಫೌಂಡೇಶನ್, ಗ್ರ್ಯಾಮ್ ಸಂಸ್ಥೆ, ಮೈಸೂರು, ಉದ್ಯಮ್ ಫೌಂಡೇಶನ್ ಹಾಗೂ ಡ್ರೀಮ್ ಎ ಡ್ರೀಮ್ ಸಂಸ್ಥೆಯವರು ಹಾಗೂ ರಚನಾ ಸಮಿತಿಯವರಿಗೆ ಶಿಕ್ಷಣ ಇಲಾಖೆಯು ಆಭಾರಿಯಾಗಿದೆ.

**ನಿರ್ದೇಶಕರು**
ಡಿ.ಎಸ್.ಇ.ಆರ್.ಟಿ

## ರಸ್ತೆ ಸುರಕ್ಷತೆ


| | | | ಶೀರ್ಷಿಕೆ | ಪು.ಸಂಖ್ಯೆ |
|---|---|---|---|---|
| | ಪೀಠಿಕೆ | | | 2–4 |
| 1 – 3 | ಅರಿವು | : | ನನಗಾಗಿ ರಸ್ತೆ ನಿಯಮಗಳು | 4–6 |
| 1 – 3 | ಅನುಭವ | : | ಸರಿ ತಪ್ಪು ಗುರ್ತಿಸಿ, ಆಲೋಚನೆ ಹಂಚಿಕೊಳ್ಳಿ ! | 7 |
| 1 – 3 | ಅವಲೋಕನ | : | ಚಿತ್ರ ಬಿಡಿಸೋಣ ! | 8 |
| 4 – 5 | ಅರಿವು | : | ನನಗೆಷ್ಟು ತಿಳಿದಿದೆ ? | 9–10 |
| 4 – 5 | ಅನುಭವ | : | ನಿಮ್ಮ ಅನುಭವ ಹಂಚಿಕೊಳ್ಳಿ ! | 11–12 |
| 4 – 5 | ಅವಲೋಕನ | : | ಚಿತ್ರ ಬಿಡಿಸೋಣ | 13 |
| 6 – 8 | ಅರಿವು | : | ನಾನೇನು ಮಾಡಬಲ್ಲೆ ? | 14 |
| 6 – 8 | ಅನುಭವ | : | ಸನ್ನಿವೇಶಗಳನ್ನು ಕಲ್ಪಿಸಿಕೊಂಡು ನಟಿಸೋಣ ! | 15–17 |
| 6 – 8 | ಅವಲೋಕನ | : | ಸಂದೇಹ ಪರಿಹರಿಸಿಕೊಳ್ಳೋಣ ? | 18–19 |
| | ಪ್ರತಿಜ್ಞೆ | | | 20 |
| | ಸಲಹಾತ್ಮಕ ಚಟುವಟಿಕೆಗಳು | | | 20 |

# ರಸ್ತೆ ಸುರಕ್ಷತೆ

**ಪೀಠಿಕೆ :**

ಮಾನವ ಸಂಘ ಜೀವಿ ಮತ್ತು ಬುದ್ಧಿ ಜೀವಿ. ಆತನ ಆವಿಷ್ಕಾರಗಳಲ್ಲಿ ಸುಲಭ ಸೌಕರ್ಯಗಳ ಆವಿಷ್ಕಾರಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ ಕಾರಣ ಜೀವನ ಶೈಲಿಯನ್ನು ಸರಳೀಕರಣಗೊಳಿಸಿಕೊಂಡಿರುತ್ತಾನೆ. ನಾಗರೀಕತೆಯ ಉತ್ತುಂಗದಲ್ಲಿರುವ ಈತ ಈಗ ಹಕ್ಕಿಯಂತೆ ಹಾರಬಲ್ಲ, ಮೀನಿನಂತೆ ನೀರಿನಲ್ಲಿ ಈಜಬಲ್ಲ. ಅಂತಹ ವಾಹನ ಸೌಲಭ್ಯಗಳನ್ನು ಕಂಡುಹಿಡಿದ ಈತ ತನ್ನ ರಕ್ಷಣೆಯ ಬಗ್ಗೆ ಕೆಲವೊಮ್ಮೆ ಅಜಾಗರೂಕನಾಗುತ್ತಾನೆ. ಇಂದಿನ ಯುವ ಪೀಳಿಗೆಯ ಬಹುತೇಕ ಸಾವು–ನೋವುಗಳಿಗೆ ಮುಖ್ಯಕಾರಣ ರಸ್ತೆ ಅಪಘಾತಗಳು. ಆದಕಾರಣ ಇಂದಿನ ಮಕ್ಕಳಲ್ಲಿ ರಸ್ತೆ ಸುರಕ್ಷತೆಯ ಬಗ್ಗೆ ಜಾಗೃತಿ ಮೂಡಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಶಾಲಾ ಹಂತದಲ್ಲಿಯೇ ಇದರ ಅರಿವನ್ನು ಮಕ್ಕಳಲ್ಲಿ ಮೂಡಿಸಿ, ರಸ್ತೆ ಅಪಘಾತಗಳಿಗೆ ಕಾರಣಗಳಾವುವು? ಆ ಸಂದರ್ಭಗಳಲ್ಲಿ ಜವಾಬ್ದಾರಿಯುತ ನಾಗರೀಕನ ಕರ್ತವ್ಯವೇನು? ತಾನು ಕೈಗೊಳ್ಳಬಹುದಾದ ಮುಂಜಾಗ್ರತ ಕ್ರಮಗಳೇನು? ಸುರಕ್ಷತಾ ಕ್ರಮಗಳ ಪಾಲನೆ ಹೇಗೆ ಮಾಡಬೇಕು? ಈ ರೀತಿಯ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಲು ಈ ಮಾಡ್ಯೂಲ್‌ನಲ್ಲಿ ಸೂಚಿಸಿರುವ ಚಟುವಟಿಕೆಗಳು ಸಹಕಾರಿಯಾಗಿವೆ.

ಇದನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಹಾಗೂ ಸಾಧಿಸಬೇಕಾದ ಕೆಲವು ನಿರ್ದಿಷ್ಟ ಉದ್ದೇಶಗಳು ಮತ್ತು ಕಲಿಕೆಯ ಫಲಿತಗಳನ್ನು ಗಮನದಲ್ಲಿಟ್ಟುಕೊಂಡು ಈ ಮಾಡ್ಯುಲ್‌ನ್ನು ವಿನ್ಯಾಸಗೊಳಿಸಲಾಗಿದೆ. ಸಂಭ್ರಮ ಶನಿವಾರದ ಪ್ರತಿಯೊಂದು ವಿಷಯವನ್ನು ಆಳವಾಗಿ ಅರಿತು ತೊಡಗಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಸಹಾಯವಾಗುವಂತೆ ಮಾಡ್ಯುಲ್ ಅನ್ನು ಕೆಳಕಂಡಂತೆ ಮೂರು ಘಟಕಗಾಗಿ ವಿಂಗಡಿಸಲಾಗಿದೆ.

- ಅರಿವು
- ಅನುಭವ ಮತ್ತು
- ಅವಲೋಕನ/ಪ್ರತಿಫಲನ

ಈ ಮೂರು ಅಂಶಗಳು ಮಕ್ಕಳಿಗೆ ಬ್ಯಾಗ್‌ರಹಿತ ದಿನ ಎಂಬ ಪರಿಕಲ್ಪನೆಯ ಪ್ರತಿಯೊಂದು ಘಟಕವನ್ನು ಆಳವಾಗಿ ಅರಿಯುವುದರ ಜೊತೆಗೆ ಅದರೊಡನೆ ತೊಡಗಿಸಿಕೊಳ್ಳಲು ಅವಕಾಶ ನೀಡುತ್ತವೆ. ಇದು ಮಕ್ಕಳಿಗಾಗಿಯೇ ಆಯೋಜಿಸಲ್ಪಟ್ಟ ಕಾರ್ಯಕ್ರಮವಾಗಿದ್ದು ಈ ಕೈಪಿಡಿಯನ್ನು ಜಾರಿಗೊಳಿಸುವಲ್ಲಿ ಮಹತ್ವದ ಪಾತ್ರವನ್ನು ಮಕ್ಕಳೇ ವಹಿಸುವಂತೆ ಸಂರಚಿಸಲಾಗಿದೆ. ಇದರಲ್ಲಿ ಕೆಲವು ಹಿರಿಯ ವಿದ್ಯಾರ್ಥಿಗಳು ನೇತೃತ್ವ ವಹಿಸುವಂತೆ ಪ್ರೇರೇಪಿಸಬೇಕು. ಮಕ್ಕಳು ಸಕ್ರಿಯವಾಗಿ ಭಾಗವಹಿಸಿ, ಈ ಮಾಡ್ಯೂಲ್ ಅನ್ನು ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ಶಿಕ್ಷಕರು ಅವರಿಗೆ ಮಾರ್ಗದರ್ಶಕರಾಗಿ ಮಹತ್ವದ

ಪಾತ್ರವನ್ನು ವಹಿಸಬೇಕಾಗುತ್ತದೆ. ಈ ಕೆಳಗಿನ ಕಾರ್ಯಗಳನ್ನು ನಿರ್ವಹಿಸುವಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಒತ್ತಾಸೆ ಹಾಗೂ ಮಾರ್ಗದರ್ಶನ ನೀಡುವುದು;

- ಎಲ್ಲಾ ಮಕ್ಕಳು ಆಯಾ ಹಂತಗಳಿಗೆ ನೀಡಿರುವ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದನ್ನು ಖಾತ್ರಿಪಡಿಸಿಕೊಳ್ಳುವುದು.
- ಚಟುವಟಿಕೆಗಳಿಂದ ಯಾವ ವಿದ್ಯಾರ್ಥಿಯೂ ಹೊರ ಉಳಿಯದಂತೆ ಅಥವಾ ಅದೇ ವಿದ್ಯಾರ್ಥಿ ಪುನರಾವರ್ತನೆ ಆಗದಂತೆ ಗಮನಿಸುವುದು. ಪ್ರತಿ ಬಾರಿ ಬೇರೆ ಬೇರೆ ವಿದ್ಯಾರ್ಥಿಗಳು ಚಟುವಟಿಕೆಗಳ ನೇತೃತ್ವ ವಹಿಸುವುದನ್ನು ಖಾತ್ರಿಪಡಿಸಿಕೊಳ್ಳುವುದು.
- ಮಕ್ಕಳು ಚಟುವಟಿಕೆ ಕೈಗೊಳ್ಳುವಾಗ ಪೂರ್ಣ ಸ್ವಾತಂತ್ರ್ಯ ಹಾಗೂ ಅವಶ್ಯಕತೆ ಇದ್ದಾಗ ಅವರಿಗೆ ಸೂಕ್ತ ಮಾರ್ಗದರ್ಶನ ನೀಡುವುದು.
- ನಿರೂಪಿಸುತ್ತಿರುವ ವಿದ್ಯಾರ್ಥಿಗಳು ಅಪೇಕ್ಷೆ ಪಟ್ಟಾಗ ಮಾತ್ರ ಮಾರ್ಗದರ್ಶನ ನೀಡುವುದು, ಇಲ್ಲವಾದಲ್ಲಿ ಶಿಕ್ಷಕರು ಮಧ್ಯೆ ಪ್ರವೇಶಿಸಬಾರದು.
- ಅನೇಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿ ನಾಯಕ/ನಿರೂಪಕರು ಚರ್ಚೆಗಳ ಸಾರಾಂಶವನ್ನು ಪರಿಣಾಮಕಾರಿಯಾಗಿ ಪ್ರಸ್ತುತಪಡಿಸಬೇಕಾಗುತ್ತದೆ. ಅಂತಹ ಸನ್ನಿವೇಶದಲ್ಲಿ ಅವರಿಗೆ ಹೆಚ್ಚಿನ ಮಾರ್ಗದರ್ಶನ ನೀಡುವುದು.
- ಶಾಲೆ ಅಥವಾ ತರಗತಿಗಳಲ್ಲಿ ಚರ್ಚೆ ಮತ್ತು ಕ್ರೀಡಾ ಪ್ರದರ್ಶನಗಳಿಗಾಗಿ ಪ್ರತ್ಯೇಕ ಸ್ಥಳಗಳನ್ನು ಗುರ್ತಿಸಿ ಅವಕಾಶ ಕಲ್ಪಿಸುವುದು.
- ಚಟುವಟಿಕೆಗಳನ್ನು ನಿರ್ವಹಿಸುವ ಮುನ್ನ ಅಗತ್ಯ ಲೇಖನ ಸಾಮಗ್ರಿಗಳು ಮತ್ತು ಇತರೆ ವಸ್ತುಗಳು ಲಭ್ಯವಾಗಿವೆಯೇ ಎಂಬುದನ್ನು ಖಚಿತ ಪಡಿಸಿಕೊಳ್ಳುವುದು.
- ಗುಂಪುಗಳನ್ನು ಮಾಡುವಾಗ ಬಾಲಕ ಮತ್ತು ಬಾಲಕಿಯರಿಗೆ ಸಮಾನ ಅವಕಾಶಗಳು ದೊರೆಯುವಂತೆ ಮುತುವರ್ಜಿ ವಹಿಸುವುದು.
- ಬ್ಯಾಗ್ ರಹಿತ ದಿನದ ಉದ್ದೇಶಗಳಿಗನುಗುಣವಾಗಿ ಕೊಂಚವೂ ಉತ್ಸಾಹ ಕಡಿಮೆಯಾಗದ ಹಾಗೆ ಚಟುವಟಿಕೆಗಳನ್ನು ನಿರ್ವಹಿಸುವಾಗ ಸಂತಸದಾಯಕ ವಾತಾವರಣವಿರುವುದನ್ನು ಖಚಿತ ಪಡಿಸಿಕೊಳ್ಳುವುದು.
- ವಿದ್ಯಾರ್ಥಿಗಳನ್ನು ನಾಳಿನ ಉತ್ತಮ ಪ್ರಜೆಗಳನ್ನಾಗಿ ರೂಪಿಸುವಂತಹ ಮಹತ್ತರ ಉದ್ದೇಶವನ್ನು ಹೊಂದಿರುವ ಬ್ಯಾಗ್ ರಹಿತ ದಿನದ ಆಚರಣೆ ಅರ್ಥಪೂರ್ಣವಾಗುವಂತೆ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ವಿದ್ಯಾರ್ಥಿಗಳನ್ನು ಪ್ರೇರೇಪಿಸುವುದು.

**ಮಕ್ಕಳೇ, ರಸ್ತೆ ಸುರಕ್ಷತೆ ಎಂದರೇನು? ಎಂಬುದನ್ನು ಅರ್ಥ ಮಾಡಿಕೊಳ್ಳೋಣ !**

ಮಕ್ಕಳೇ, ನಾನು ಪ್ರತಿ ದಿನ ಶಾಲೆಗೆ ಸರಿಯಾದ ಸಮಯಕ್ಕೆ ಹೊರಡುತ್ತೇನೆ. ಆದರೆ ಕೆಲವೊಂದು ದಿನ ತಡವಾಗಿ ಶಾಲೆ ಸೇರುತ್ತೇನೆ. ಕಾರಣ ಏನಿರಬಹುದು? ನಾನಂತೂ ಬೇರೆ ಎಲ್ಲೂ–ಯಾರ ಬಳಿಯೂ ಹರಟೆ ಹೊಡೆಯುತ್ತಾ ನಿಲ್ಲುವುದಿಲ್ಲ (ಮಕ್ಕಳು ನಗುವರು).

(ಮಕ್ಕಳಿಂದ ಉತ್ತರಗಳನ್ನು ಅಪೇಕ್ಷಿಸಬೇಕು)

ಮಕ್ಕಳ ಉತ್ತರಗಳನ್ನು ಸಾರಾಂಶಿಸುತ್ತಾ – ಹೌದು ಮಕ್ಕಳೇ, ಟ್ರಾಫಿಕ್, ಟ್ರಾಫಿಕ್, ಟ್ರಾಫಿಕ್ ... ಜನಸಂಖ್ಯೆ ಹೆಚ್ಚಾಗುತ್ತಿದ್ದಂತೆ ರಸ್ತೆಗಳಲ್ಲಿ ವಾಹನಗಳ ಹಾವಳಿ ಹೆಚ್ಚುತ್ತಿದೆ. ಹಾಗಾಗಿ ರಸ್ತೆಗಳಲ್ಲಿ ಟ್ರಾಫಿಕ್ ಸಮಸ್ಯೆ ಸರ್ವೇಸಾಮಾನ್ಯವಾಗಿದೆ. ನಾನೂ ಕೂಡಾ ಈ ಸಮಸ್ಯೆಯಿಂದ ಹೊರತಾಗಿಲ್ಲ. ಕೆಲವೊಮ್ಮೆ ಈ ಟ್ರಾಫಿಕ್‌ನಲ್ಲಿ ಸಿಲುಕಿ ಶಾಲೆಗೆ ತಡವಾಗಿ ಬರುತ್ತೇನೆ. ನಾವು ಮನೆ ಬಿಡುವಾಗಲೇ ಈ ರೀತಿಯ ಅಡಚಣೆಗಳನ್ನು ಗಮನದಲ್ಲಿರಿಸಿಕೊಂಡು ಸ್ವಲ್ಪ ಬೇಗ ಮನೆ ಬಿಡಬೇಕಾಗುತ್ತದೆ.

ಹಾಗಾದರೆ ಈ ಟ್ರಾಫಿಕ್‌ಗೆ ಕಾರಣಗಳೇನು? ರಸ್ತೆಯಲ್ಲಿ ಓಡಾಡುವಾಗ ಯಾವೆಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡರೆ ಒಬ್ಬ ಪ್ರಜ್ಞಾವಂತ ನಾಗರೀಕನಾಗಬಹುದೆಂದು ಈ ದಿನ ತಿಳಿದುಕೊಳ್ಳೋಣ.

## ಅರಿವು :

**ತರಗತಿ 1–3 :** **(60 ನಿಮಿಷಗಳು)**

# ನನಗಾಗಿ ರಸ್ತೆ ನಿಯಮಗಳು



- ನಗರ/ಪಟ್ಟಣ ಪ್ರದೇಶಗಳಲ್ಲಿ ಎರಡು ರಸ್ತೆಗಳು ಕೂಡುವ ಜಾಗದಲ್ಲಿ ಬಿಳಿ/ಹಳದಿ ಬಣ್ಣದ ಗುರುತುಗಳನ್ನು ಮಾಡಿರುವುದನ್ನು ಗಮನಿಸಿರುವಿರಾ?
- ಸಿಗ್ನಲ್ ನಲ್ಲಿರುವ ಬಣ್ಣಗಳು ಏನನ್ನು ಸೂಚಿಸುತ್ತವೆ?

- ರಸ್ತೆ ದಾಟುವ ಮುಂಚೆ ಗಮನಿಸಬೇಕಾದ ಅಂಶಗಳೇನು?
- ವಾಹನಗಳಿಗೆ ಹಾರ್ನ್ ಏಕೆ ಇರುತ್ತದೆ?
- ನಿಂತಿರುವ ವಾಹನಗಳ ಮಧ್ಯೆಯಿಂದ ರಸ್ತೆ ದಾಟುವುದು ಸುರಕ್ಷಿತವೇ?





- ರಸ್ತೆಯಲ್ಲಿ ವಾಹನಗಳು ಚಲಿಸುತ್ತವೆ. ಪಾದಚಾರಿಗಳು ಸುರಕ್ಷಿತವಾಗಿ ಎಲ್ಲಿ ನಡೆಯಬೇಕು?
- ಕಾಲುದಾರಿಯನ್ನು ಏಕೆ ಬಳಸಬೇಕು?

- ರಸ್ತೆ ಮೇಲೆ ಶಾಂತವಾಗಿ ಏಕೆ ನಡೆಯಬೇಕು? ರಸ್ತೆಯಲ್ಲಿ ಸಂಚರಿಸುವಾಗ ಹೇಗೆ ಎಚ್ಚರಿಕೆಯಿಂದ ಇರಬೇಕು?
- ರಸ್ತೆಯಲ್ಲಿ ಏಕೆ ಆಟವಾಡಬಾರದು?






- ರಸ್ತೆ ದಾಟುವ ಮುಂಚೆ ಎರಡೂ ಬದಿ ಏಕೆ ನೋಡಬೇಕು?
- ಬಾಗಿರುವ ರಸ್ತೆಯಲ್ಲಿ ಏಕೆ ರಸ್ತೆ ದಾಟಬಾರದು?

- ಬೈಕ್ ಅಥವಾ ಮೋಟರ್ ಸೈಕಲ್ ಚಲಾಯಿಸುವಾಗ ಹೆಲ್ಮೆಟ್ ಏಕೆ ಧರಿಸಬೇಕು?
- ಬೈಸಿಕಲ್‌ಗಾಗಿ ಇರುವ ರಸ್ತೆಯನ್ನೇ ಏಕೆ ಬಳಸಬೇಕು?
- ಕತ್ತಲಲ್ಲಿ ಸಂಚರಿಸುವಾಗ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳು ಯಾವುವು?



- ವಾಹನಗಳಲ್ಲಿ ಪ್ರಯಾಣಿಕರಾಗಿ ಸಂಚರಿಸುವಾಗ ಪಾಲಿಸಬೇಕಾದ ಸುರಕ್ಷತಾ ಅಂಶಗಳು ಯಾವುವು?
- ತಲೆ, ಕೈಯನ್ನು ವಾಹನಗಳಿಂದ ಏಕೆ ಹೊರ ಹಾಕಬಾರದು?



**ನಿರೂಪಕ/ನಾಯಕರಿಗೆ ಸೂಚನೆಗಳು :**

- ವಿದ್ಯಾರ್ಥಿಗಳನ್ನು ಸನ್ನಿವೇಶಗಳಿಗೆ ಅನುಗುಣವಾಗಿ 5–6 ವಿದ್ಯಾರ್ಥಿಗಳ ಗುಂಪು ಮಾಡಿ; ವಿದ್ಯಾರ್ಥಿಗಳನ್ನು ಆಯಾ ಗುಂಪಿನಲ್ಲಿ ಕುಳಿತುಕೊಳ್ಳಲು ತಿಳಿಸಿ.
- ಈ ಚಟುವಟಿಕೆಯಲ್ಲಿ ನೀಡಿರುವಂತೆ ಹಿಂದೆ ಪ್ರಶ್ನೆ ಬರೆದಿರುವ ಹಾಗೂ ಚಿತ್ರ ಹೊಂದಿರುವ ಫ್ಲಾಶ್ ಕಾರ್ಡ್‌ನ್ನು ಪ್ರತಿ ಗುಂಪಿಗೆ ನೀಡಿ
- ಕೊಟ್ಟಿರುವ ಪ್ರಶ್ನೆಯ ಕುರಿತು ಚರ್ಚಿಸಲು ಪ್ರತಿ ಗುಂಪಿಗೂ ಇಪ್ಪತ್ತು ನಿಮಿಷ ಕಾಲಾವಕಾಶ ನೀಡಿ.
- ನಂತರದ 20 ನಿಮಿಷಗಳಲ್ಲಿ ತಮ್ಮ ವಿಚಾರಗಳನ್ನು ಹಂಚಿಕೊಳ್ಳಲು ಪ್ರತಿ ಗುಂಪಿಗೂ ತಿಳಿಸಿ.
- ಮುಂದಿನ 20 ನಿಮಿಷಗಳನ್ನು ರಸ್ತೆಯನ್ನು ಸುರಕ್ಷಿತವಾಗಿ ಬಳಸುವ ವಿವಿಧ ಚಟುವಟಿಕೆಗಳ ಅವಶ್ಯಕತೆ ಬಗ್ಗೆ ಸಾರಾಂಶಿಸಲು ತಿಳಿಸಿ.
- ಪ್ರತಿ ಫ್ಲಾಶ್ ಕಾರ್ಡ್‌ನಲ್ಲಿನ ಪ್ರಶ್ನೆಗಳಿಗೆ ತಮಗೆ ತಿಳಿದಿರುವ ಉತ್ತರಗಳನ್ನು ನೀಡಲು ಮಕ್ಕಳಿಗೆ ಪ್ರೇರೇಪಿಸಿ.
- ಫ್ಲಾಶ್ ಕಾರ್ಡ್‌ನಲ್ಲಿನ ಪ್ರಶ್ನೆಗಳನ್ನು ಬಳಸಿ ಕಲಿಕೆಯನ್ನು ಸಾರಾಂಶಿಸಿ.
- ಫ್ಲಾಶ್ ಕಾರ್ಡ್‌ನಲ್ಲಿರಬೇಕಾದ ಪ್ರಶ್ನೆಗಳು.

**ಉದಾ :** ▲ ವಾಹನಗಳಲ್ಲಿ ಪ್ರಯಾಣಿಕರಾಗಿ ಸಂಚರಿಸುವಾಗ ಪಾಲಿಸಬೇಕಾದ ಸುರಕ್ಷತಾ ಅಂಶಗಳು ಯಾವುವು?

▲ ತಲೆ, ಕೈಯನ್ನು ವಾಹನಗಳಿಂದ ಏಕೆ ಹೊರ ಹಾಕಬಾರದು?


ಅನುಭವ :

## ತರಗತಿ 1–3 : ಸರಿ ತಪ್ಪು ಗುರ್ತಿಸಿ, ಆಲೋಚನೆ ಹಂಚಿಕೊಳ್ಳಿ ! (30 ನಿಮಿಷಗಳು)

ಬಣ್ಣ ಬಣ್ಣ ನಾನು ಕೆಂಪು ಬಣ್ಣ
ನನ್ನ ನೋಡಿ ನೀ ನಿಲ್ಲಬೇಕಣ್ಣ
ಇಲ್ಲವೆಂದು ನೀ ಮುಂದೆ ಹೋದರೆ
ತೆರಬೇಕಾಗುವುದು ನೀ ತುಂಬಾ ಹಣ

ಬಣ್ಣ ಬಣ್ಣ ನಾನು ಹಳದಿ ಬಣ್ಣ
ನನ್ನ ದೀಪ ನೋಡಿ ನೀನು
ಹೊರಡಲು ಸಿದ್ಧರಾಗಣ್ಣ
ನಿಧಾನಿಸಿ ನೀ ಮುಂದೆ ಹೋಗಣ್ಣ

ಬಣ್ಣ ಬಣ್ಣ ನಾನು ಹಸಿರು ಬಣ್ಣ
ನನ್ನ ನೋಡಿ ನೀವು ಚಲಿಸಬೇಕಣ್ಣ
ನಾನು ತೋರುವೆ ನಿನಗೆ
ಹೊರಡುವ ಸೂಚನೆ ಅಣ್ಣ





**ನಿರೂಪಕ/ನಾಯಕರಿಗೆ ಸೂಚನೆಗಳು :**

- ಸನ್ನಿವೇಶಕ್ಕೆ 5–6 ವಿದ್ಯಾರ್ಥಿಗಳ ಗುಂಪು ಮಾಡಿ; ವಿದ್ಯಾರ್ಥಿಗಳು ಗುಂಪಿನಲ್ಲಿ ಕುಳಿತುಕೊಳ್ಳಲಿ.
- ಪ್ರತಿ ಗುಂಪಿಗೆ ಒಂದೊಂದು ಚಿತ್ರ ನೀಡಿ/ತೋರಿಸಿ ಮುಂದಿನ ಪ್ರಶ್ನೆಗಳ ಆಧಾರದ ಮೇಲೆ ಚರ್ಚೆ ಆರಂಭಿಸಿ.
- ಈ ಚಿತ್ರದಲ್ಲಿ ಮಾಡುತ್ತಿರುವುದು ಸರಿಯೇ? ಅಥವಾ ತಪ್ಪೇ?
- ಸರಿ ಇದ್ದಲ್ಲಿ ಏಕೆ? ತಪ್ಪು ಇದ್ದಲ್ಲಿ ಏಕೆ?
- ಇಂತಹ ಸನ್ನಿವೇಶದಲ್ಲಿ ಏನು ಮಾಡಬಹುದು ಎಂದು ನೀವು ಭಾವಿಸುತ್ತೀರಿ?
- ಪ್ರತಿ ಚಿತ್ರದ ಕುರಿತು ಮಾತನಾಡುವಂತೆ ಮಕ್ಕಳನ್ನು ಪ್ರೇರೇಪಿಸಿ.
- ಗುಂಪಿನಲ್ಲಿರುವ ಪ್ರತಿ ವಿದ್ಯಾರ್ಥಿ ಮೇಲ್ಕಂಡ ಚಟುವಟಿಕೆಯಲ್ಲಿ ಭಾಗವಹಿಸುವಂತೆ ನೋಡಿಕೊಳ್ಳುವುದು. ಸಾಧ್ಯವಾದರೆ ಪ್ರತಿ ವಿದ್ಯಾರ್ಥಿ ಕನಿಷ್ಠ ಒಂದು ವಾಕ್ಯವನ್ನಾದರೂ ಹೇಳುವಂತೆ ನೋಡಿಕೊಳ್ಳಿ.
- ವಿದ್ಯಾರ್ಥಿಗಳು ಈ ಚಟುವಟಿಕೆ ಮುಗಿದ ತಕ್ಷಣ ಮುಂದಿನ 30 ನಿಮಿಷಗಳು ಅವರ ಹಿರಿಯ ವಿದ್ಯಾರ್ಥಿಗಳ "ರಸ್ತೆ ಸುರಕ್ಷತೆ" ಕುರಿತ ನಾಟಕ ಪ್ರದರ್ಶನ ವೀಕ್ಷಿಸಲು ಅವಕಾಶ ಮಾಡಿಕೊಡಿ.

ಮಕ್ಕಳೇ !ಈಗ ನಾವು ಕಲಿತಿರುವ ಕುರಿತು ಅವಲೋಕನ ಮಾಡೋಣ.

ಅವಲೋಕನ :

ತರಗತಿ 1–3 (60 ನಿಮಿಷಗಳು)

## ಚಿತ್ರ ಬಿಡಿಸೋಣ !

ನಿಲ್ಲಿ ! ನೋಡಿ ! ಕೇಳಿ !

ಟ್ರಾಫಿಕ್ ಸಿಗ್ನಲ್ ಬಳಸಿ

ಹೆಲ್ಮೆಟ್ ಧರಿಸಿ
ಜೀವ ಉಳಿಸಿ !

ರಸ್ತೆ ಮಧ್ಯೆ ಹೋಗದಿರಿ !
ಅಪಘಾತದಿಂದ ದೂರವಿರಿ !

ನಿಧಾನ ಚಲನೆ
ಸುರಕ್ಷಿತ ಚಲನೆ

**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ಎಲ್ಲ ವಿದ್ಯಾರ್ಥಿಗಳಿಗೆ ಒಟ್ಟಿಗೆ ಸೇರಲು ಹೇಳುವುದು.
- ವಿದ್ಯಾರ್ಥಿಗಳಿಗೆ (ಬಿಳಿ ದೊಡ್ಡ ಶೀಟ್ /ಹಾಳೆ) ಕ್ರೇಯಾನ್‌ಗಳು/ಬಣ್ಣದ ಪೆನ್ಸಿಲ್‌ಗಳು/ರಬ್ಬರ್ ನೀಡುವುದು.
- ಮೇಲೆ ನೀಡಿರುವ ಯಾವುದಾದರು ಒಂದು ವಿಷಯದ ಕುರಿತು ಪೋಸ್ಟರ್ (ಚಿತ್ರ ಪಟ) ತಯಾರಿಸಲು ಹೇಳುವುದು. (ನಿರೂಪಕ ಅಥವಾ ವಿದ್ಯಾರ್ಥಿ ನಾಯಕರು ಸಂಬಂಧಿಸಿದ ಇತರೆ ವಿಷಯಗಳನ್ನು ಸೇರಿಸಬಹುದು.)
- ಕಿರಿಯರ ತಂಡಕ್ಕೆ (1–3 ತರಗತಿ) ಮೇಲ್ಕಂಡ ವಿಷಯದಲ್ಲಿ ಆಯ್ದು ಕೊಂಡ ವಿಷಯದ ಕುರಿತು ತಮಗೆ ಅರ್ಥವಾದ ರೀತಿಯಲ್ಲಿ ಚಿತ್ರ ಬಿಡಿಸಲು ಹೇಳುವುದು.
- ಹಿರಿಯರ ತಂಡಕ್ಕೆ (4–5 ತರಗತಿ) ತಾವು ಮೇಲೆ ಆರಿಸಿಕೊಂಡ ವಿಷಯದ ಕುರಿತು ಚಿತ್ರ ಪಟ ಮತ್ತು ಘೋಷವಾಕ್ಯಗಳನ್ನು (ಸ್ಲೋಗನ್ಸ್) ಬರೆಯಲು ಹೇಳುವುದು.
- ರಸ್ತೆ ಸುರಕ್ಷತೆಯ ಕುರಿತು ತಮ್ಮ ಗ್ರಾಮ/ಊರಿನಲ್ಲಿ ತೆಗೆದುಕೊಳ್ಳಬಹುದಾದ ಕ್ರಮಗಳ ಕುರಿತು ಬರೆಯಲು ವಿದ್ಯಾರ್ಥಿಗಳಿಗೆ ತಿಳಿಸುವುದು. ( ಟಿಪ್ಪಣಿ ರೂಪದಲ್ಲಿ)
- ಎಲ್ಲಾ ವಿದ್ಯಾರ್ಥಿಗಳು ಬರೆದಿರುವ /ತಯಾರಿಸಿರುವ ಚಿತ್ರ ಪಟಗಳನ್ನು ಎಲ್ಲರಿಗೂ ಕಾಣುವಂತೆ ಪ್ರದರ್ಶಿಸಲು ಹೇಳುವುದು.




*`Hug your kids at home, but belt them in the car'*

ಅರಿವು :

ತರಗತಿ 4–5 : (60 ನಿಮಿಷಗಳು)

## ನನಗೆಷ್ಟು ತಿಳಿದಿದೆ ?



- ಶಾಲೆಯ ಸುತ್ತಮುತ್ತಲಿರುವ ರಸ್ತೆಗಳನ್ನು ಗಮನಿಸಿ.
- ಅವುಗಳು ಪಕ್ಕಾ ರಸ್ತೆಯೇ? ಕಚ್ಚಾ ರಸ್ತೆಯೇ? ಗುರ್ತಿಸಿ.
- ಯಾವುದು ಉತ್ತಮ ರಸ್ತೆ? ಏಕೆ?




- ನೀವು ರಸ್ತೆಯ ಅಕ್ಕ–ಪಕ್ಕದಲ್ಲಿ ಸುರಕ್ಷಿತವಾಗಿ ಹೇಗೆ ನಡೆಯಬೇಕು?
- ಪಾದಾಚಾರಿ ರಸ್ತೆಯ ಬಳಕೆ ಏಕೆ ಮಾಡಬೇಕು?
- ಪಾದಾಚಾರಿ ರಸ್ತೆಯನ್ನು ಯಾವಾಗ ಬಳಸಬೇಕು?




- ನೀವು ಕಂಡಂತೆ ನಿಮ್ಮ ಊರಿನ ಮುಖ್ಯ ರಸ್ತೆಗಳ ಬದಿಗಳಲ್ಲಿ ಇಂತಹ ಸೂಚನಾ ಫಲಕಗಳನ್ನು ಗಮನಿಸಿರುವಿರಾ?
- ಅವುಗಳಿಂದ ನಿಮಗೆ ಏನು ತಿಳಿಯುವುದು?
- ಈ ಚಿತ್ರದಲ್ಲಿನ ಸೂಚನಾ ಫಲಕಗಳ ಅರ್ಥ ತಿಳಿಯಲು ಪ್ರಯತ್ನಿಸಿ.




- ಈ ಬಣ್ಣದ ಸಂಕೇತಗಳನ್ನು ಎಲ್ಲಿ ಕಾಣುವಿರಿ?
- ಸಂಕೇತ ದೀಪಗಳ ಬಣ್ಣಗಳು ಏನು ಸೂಚಿಸುತ್ತವೆ?
- X ಮತ್ತು ↓ ಸಂಕೇತಗಳ ವಿಶೇಷತೆ ಏನು?



- ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಪೊಲೀಸರು ನಿರ್ವಹಿಸುವ ಕರ್ತವ್ಯಗಳೇನು?
- ನಾಗರಿಕರು ಅವರಿಗೆ ಹೇಗೆ ಸಹಕರಿಸಬೇಕು?
- ಟ್ರಾಫಿಕ್ ಪೊಲೀಸ್ ದೂರವಾಣಿ ಸಂಖ್ಯೆ ಏನು?

- ನೀವು ರಸ್ತೆಯನ್ನು ದಾಟುವಾಗ ಸುರಕ್ಷಿತವಾಗಿ ದಾಟಲು ಏನೇನು ಮಾಡುವಿರಿ?
- ನೀವು ಒಂಟಿಯಾಗಿ ರಸ್ತೆ ದಾಟಬಹುದೇ? ಏಕೆ?
- ನೀವು ರಸ್ತೆ ದಾಟುವಾಗ ಯಾವುದಾದರೂ ವಾಹನ ಬಂದರೆ ಏನು ಮಾಡುವಿರಿ?



**ನಿರೂಪಕ/ನಾಯಕರಿಗೆ ಸೂಚನೆಗಳು :**

- ವಿದ್ಯಾರ್ಥಿಗಳನ್ನು ಸನ್ನಿವೇಶಗಳಿಗೆ ಅನುಗುಣವಾಗಿ 5–6 ವಿದ್ಯಾರ್ಥಿಗಳ ಗುಂಪು ಮಾಡಿ; ವಿದ್ಯಾರ್ಥಿಗಳನ್ನು ಆಯಾ ಗುಂಪಿನಲ್ಲಿ ಕುಳಿತುಕೊಳ್ಳಲು ತಿಳಿಸಿ.
- ಹಿಂದೆ ಪ್ರಶ್ನೆ ಬರೆದಿರುವ ಹಾಗೂ ಚಿತ್ರ ಹೊಂದಿರುವ ಫ್ಲಾಶ್ ಕಾರ್ಡ್ ಅನ್ನು ಪ್ರತಿ ಗುಂಪಿಗೆ ನೀಡಿ.
- ಕೊಟ್ಟಿರುವ ಪ್ರಶ್ನೆಯ ಕುರಿತು ಚರ್ಚಿಸಲು ಪ್ರತಿ ಗುಂಪಿಗೂ ಇಪ್ಪತ್ತು ನಿಮಿಷ ಕಾಲ ಅವಕಾಶ ನೀಡಿ.
- ನಂತರದ 20 ನಿಮಿಷಗಳಲ್ಲಿ ತಮ್ಮ ವಿಚಾರಗಳನ್ನು ಹಂಚಿಕೊಳ್ಳಲು ಪ್ರತಿ ಗುಂಪಿಗೂ ತಿಳಿಸಿ.
- ಮುಂದಿನ 20 ನಿಮಿಷಗಳನ್ನು ರಸ್ತೆ ನಿಯಮಗಳನ್ನು ಪಾಲಿಸುವ ಅವಶ್ಯಕತೆ ಬಗ್ಗೆ ಸಾರಾಂಶಿಸಲು ತಿಳಿಸಿ.
- ಪ್ರತಿ ಫ್ಲಾಶ್ ಕಾರ್ಡ್‌ನಲ್ಲಿನ ಪ್ರಶ್ನೆಗಳಿಗೆ ತಮಗೆ ತಿಳಿದಿರುವಂತೆ ಉತ್ತರಗಳನ್ನು ನೀಡಲು ಮಕ್ಕಳನ್ನು ಪ್ರೇರೇಪಿಸಿ.
- ಮುಂದಿನ ಪ್ರಶ್ನೆಗಳನ್ನು ಕೇಳುವ ಮೂಲಕ ಕಲಿಕೆಯನ್ನು ಸಾರಾಂಶಿಸಿ.
- ಪ್ರತಿಯೊಂದು ರಸ್ತೆ ಸುರಕ್ಷತೆ ನಿಯಮವನ್ನು ಏಕೆ ಮತ್ತು ಹೇಗೆ ಪಾಲಿಸಬೇಕು?

ಅನುಭವ :

ತರಗತಿ 4–5 : (30 ನಿಮಿಷಗಳು)

## ನಿಮ್ಮ ಅನುಭವ ಹಂಚಿಕೊಳ್ಳಿ !

ನಿಲ್ಲಿ !
ನೋಡಿ !
ಕೇಳಿ !

ಟ್ರಾಫಿಕ್ ಸಿಗ್ನಲ್‌ನ್ನು ತಿಳಿಯಿರಿ

ರಸ್ತೆ ದಾಟುವಾಗ ಅವಸರ ಬೇಡ

ರಸ್ತೆ ಮೇಲೆ ಕೃಷಿ ಚಟುವಟಿಕೆಗಳು

ಸೈಕಲ್ ಮೇಲೆ ಸುರಕ್ಷಿತ ಚಾಲನೆ

ವಿವಿಧ ವಾಹನಗಳ ಶಬ್ದಗಳು (ಹಾರ್ನ್‌ಗಳು) ಮತ್ತು ಸೂಚನಾ ಫಲಕಗಳು

**ನಿರೂಪಕ/ನಾಯಕರಿಗೆ ಸೂಚನೆಗಳು :**

- ಮೇಲಿನ ವಿಷಯಗಳ ಚೀಟಿ ತಯಾರಿಸಿ ಪ್ರತಿ ಚೀಟಿಯನ್ನು ಪ್ರತಿ ಗುಂಪಿಗೆ ಹಂಚಿ.
- ಪ್ರತಿ ವಿಷಯಗಳ ಕುರಿತು ಅವರ ದೃಷ್ಟಿಕೋನ ಅಭಿವ್ಯಕ್ತಿಸಲು 10 ನಿಮಿಷ ಅವಕಾಶ ನೀಡಿ. (ಸಿದ್ಧತೆ ಸಮಯ)
- ಪ್ರತಿ ಗುಂಪಿನ ಪ್ರತಿಯೊಬ್ಬರೂ ಅವರಿಗೆ ಸಿಕ್ಕ ವಿಷಯದ ಕುರಿತು ಅವರಿಗೆ ತಿಳಿದ ಅಂಶಗಳನ್ನು ಹಂಚಿಕೊಳ್ಳಿ.
- ಮಕ್ಕಳಿಗೆ ತಾವು ಹೇಗೆ ಅಭಿವ್ಯಕ್ತಿಸಬೇಕು ಎಂದು ಮಾರ್ಗದರ್ಶನ ನೀಡುವುದು. 10 ನಿಮಿಷ ಮಕ್ಕಳ ಸಿದ್ಧತೆಗೆ ಅವಕಾಶ ನೀಡಿ ಮುಂದಿನ ಮಾರ್ಗದರ್ಶಿ ಅಂಶಗಳನ್ನು ತಿಳಿಸಿ.
  - ಮೇಲಿನ ಸಂದರ್ಭಗಳಲ್ಲಿ ನೀವು ಹೇಗೆ ಪ್ರತಿಕ್ರಿಯಿಸುವಿರಿ?
  - ನಿಮ್ಮ ವಿಚಾರಗಳನ್ನು ನೀವು ಏಕೆ ಒಪ್ಪುತ್ತಿದ್ದೀರಾ? ಅಥವಾ ತಿರಸ್ಕರಿಸುತ್ತಿದ್ದೀರಾ?
  - ವಿಷಯದ ಕುರಿತು ನೀವು ಮಾಡಬಹುದಾದ ಚಟುವಟಿಕೆಗಳನ್ನು ಹಂಚಿಕೊಳ್ಳಿ. ಏಕೆ ಮಾಡಬೇಕು ಅಥವಾ ಏಕೆ ಮಾಡಬಾರದು ತಿಳಿಸಿ.
  - ನೀವು ಮೇಲ್ಕಂಡ ವಿಷಯಗಳು ಅಂದರೆ ನಿಮ್ಮ ಬಳಿ ಇರುವ ಚೀಟಿಗಳಲ್ಲಿನ ವಿಷಯಗಳಿಗೆ ಕಥೆ ಕಟ್ಟಬಹುದು, ಪದ್ಯ ರಚಿಸಬಹುದು, ನಿಮ್ಮ ನೈಜ ಅನುಭವ ಹೇಳಬಹುದು ಅಥವಾ ಭಾಷಣ ಮಾಡಬಹುದು.
- ಗುಂಪಿನಲ್ಲಿರುವ ಪ್ರತಿ ವಿದ್ಯಾರ್ಥಿಯು ಮೇಲ್ಕಂಡ ಚಟುವಟಿಕೆಯಲ್ಲಿ ಭಾಗವಹಿಸುವ ಹಾಗೆ ಗಮನಿಸಿ. ಸಾಧ್ಯವಾದರೆ ಪ್ರತಿಯೊಬ್ಬ ವಿದ್ಯಾರ್ಥಿಯು ಕನಿಷ್ಠ ಒಂದು ವಾಕ್ಯವನ್ನಾದರೂ ಹೇಳುವಂತೆ ನೋಡಿಕೊಳ್ಳುವುದು.
- ಈ ವಿದ್ಯಾರ್ಥಿಗಳ ಚಟುವಟಿಕೆ ಮುಗಿದ ತಕ್ಷಣ ಮುಂದಿನ 30 ನಿಮಿಷಗಳು ಅವರ ಹಿರಿಯ ವಿದ್ಯಾರ್ಥಿಗಳ "ರಸ್ತೆ ಸುರಕ್ಷತೆ" ಕುರಿತ ನಾಟಕ ಪ್ರದರ್ಶನ ವೀಕ್ಷಿಸಲು ಅವಕಾಶ ಮಾಡಿಕೊಡುವುದು.

ಮಕ್ಕಳೇ ! ಈಗ ನಾವು ಕಲಿತಿರುವ ಕುರಿತು ಅವಲೋಕನ ಮಾಡೋಣ.

ಅವಲೋಕನ :

ತರಗತಿ 4–5 : (60 ನಿಮಿಷಗಳು)

## ಚಿತ್ರ ಬಿಡಿಸೋಣ !

ನಿಲ್ಲಿ ! ನೋಡಿ ! ಕೇಳಿ !

ಟ್ರಾಫಿಕ್ ಸಿಗ್ನಲ್ ಬಳಸಿ

ಹೆಲ್ಮೆಟ್ ಧರಿಸಿ
ಜೀವ ಉಳಿಸಿ !

ರಸ್ತೆ ಮಧ್ಯೆ ಹೋಗದಿರಿ !
ಅಪಘಾತದಿಂದ ದೂರವಿರಿ !

ನಿಧಾನ ಚಲನೆ
ಸುರಕ್ಷಿತ ಚಲನೆ

**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ಎಲ್ಲ ವಿದ್ಯಾರ್ಥಿಗಳಿಗೆ ಒಟ್ಟಿಗೆ ಸೇರಲು ಹೇಳುವುದು.
- ವಿದ್ಯಾರ್ಥಿಗಳಿಗೆ (ಬಿಳಿ ದೊಡ್ಡ ಶೀಟ್ /ಹಾಳೆ) ಕ್ರೇಯಾನ್‌ಗಳು/ಬಣ್ಣದ ಪೆನ್ಸಿಲ್‌ಗಳು/ರಬ್ಬರ್ ನೀಡುವುದು.
- ಮೇಲೆ ನೀಡಿರುವ ಯಾವುದಾದರು ಒಂದು ವಿಷಯದ ಕುರಿತು ಪೋಸ್ಟರ್ (ಚಿತ್ರ ಪಟ) ತಯಾರಿಸಲು ಹೇಳುವುದು. (ನಿರೂಪಕ ಅಥವಾ ವಿದ್ಯಾರ್ಥಿ ನಾಯಕರು ಸಂಬಂಧಿಸಿದ ಇತರೆ ವಿಷಯಗಳನ್ನು ಸೇರಿಸಬಹುದು.)
- ಕಿರಿಯರ ತಂಡಕ್ಕೆ (1–3 ತರಗತಿ) ಮೇಲ್ಕಂಡ ವಿಷಯದಲ್ಲಿ ಆಯ್ದು ಕೊಂಡ ವಿಷಯದ ಕುರಿತು ತಮಗೆ ಅರ್ಥವಾದ ರೀತಿಯಲ್ಲಿ ಚಿತ್ರ ಬಿಡಿಸಲು ಹೇಳುವುದು.
- ಹಿರಿಯರ ತಂಡಕ್ಕೆ (4–5 ತರಗತಿ) ತಾವು ಮೇಲೆ ಆರಿಸಿಕೊಂಡ ವಿಷಯದ ಕುರಿತು ಚಿತ್ರ ಪಟ ಮತ್ತು ಘೋಷವಾಕ್ಯಗಳನ್ನು (ಸ್ಲೋಗನ್ಸ್) ಬರೆಯಲು ಹೇಳುವುದು.
- ರಸ್ತೆ ಸುರಕ್ಷತೆಯ ಕುರಿತು ತಮ್ಮ ಗ್ರಾಮ/ಊರಿನಲ್ಲಿ ತೆಗೆದುಕೊಳ್ಳಬಹುದಾದ ಕ್ರಮಗಳ ಕುರಿತು ಬರೆಯಲು ವಿದ್ಯಾರ್ಥಿಗಳಿಗೆ ತಿಳಿಸುವುದು. ( ಟಿಪ್ಪಣಿ ರೂಪದಲ್ಲಿ)
- ಎಲ್ಲಾ ವಿದ್ಯಾರ್ಥಿಗಳು ಬರೆದಿರುವ /ತಯಾರಿಸಿರುವ ಚಿತ್ರ ಪಟಗಳನ್ನು ಎಲ್ಲರಿಗೂ ಕಾಣುವಂತೆ ಪ್ರದರ್ಶಿಸಲು ಹೇಳುವುದು.

ಅರಿವು :

ತರಗತಿ 6–8 : (60 ನಿಮಿಷಗಳು)

## ನಾನೇನು ಮಾಡಬಲ್ಲೆ ?

**ಕೆಳಗೆ ಕೆಲವು ಸನ್ನಿವೇಶಗಳನ್ನು ನೀಡಿದೆ. ಈ ಸನ್ನಿವೇಶಗಳು ಎದುರಾದಾಗ ತಾವು ಕೈಗೊಳ್ಳಬಹುದಾದ ಸುರಕ್ಷತಾ ಅಂಶಗಳನ್ನು ಸೂಚನೆಗಳಲ್ಲಿ ತಿಳಿಸಿರುವಂತೆ ಪಟ್ಟಿಮಾಡಿ.**






| |
|---|
| ನೀನು ಪಾದಾಚಾರಿಯಾಗಿ ರಸ್ತೆಯನ್ನು ದಾಟುವಾಗ |
| ಮನೆಯಿಂದ ಶಾಲೆಗೆ ಸೈಕಲ್‌ನಲ್ಲಿ ಬರುವಾಗ |
| ರಸ್ತೆಯಲ್ಲಿ ಬರುವಾಗ ಯಾವುದಾದರೂ ಅಪಘಾತ ಉಂಟಾಗಿದ್ದರೆ |
| ರಸ್ತೆ ಬಳಸುವಾಗ ಸಾಮಾನ್ಯವಾಗಿ ಕಂಡುಬರುವ ರಸ್ತೆ ಸುರಕ್ಷತಾ ಚಿಹ್ನೆಗಳನ್ನು ಕಂಡರೆ |
| ಬಸ್/ಕಾರ್/ರೈಲಿನಲ್ಲಿ ಪ್ರಯಾಣಿಕರಾಗಿ ಚಲಿಸುವಾಗ |
| ರಸ್ತೆಗಳ ಮೇಲೆ ಉಬ್ಬು ಮತ್ತು ತಗ್ಗುಗಳು ಕಂಡುಬಂದರೆ. |
| ನಿಮ್ಮ ಶಾಲೆಯ ಮುಂದೆ ಹೆಚ್ಚಿನ ವಾಹನಗಳು ಓಡಾಡುವಾಗ |
| ನೀವು ರಸ್ತೆ ದಾಟುವಾಗ ಅಂಗವಿಕಲರು/ವೃದ್ಧರು/ಅಶಕ್ತರು ರಸ್ತೆಯನ್ನು ದಾಟಲು ಕಷ್ಟಪಡುತ್ತಿರುವಾಗ |

**ನಿರೂಪಕ/ನಾಯಕರಿಗೆ ಸೂಚನೆಗಳು :**

- ವಿದ್ಯಾರ್ಥಿಗಳನ್ನು ಸನ್ನಿವೇಶಗಳಿಗೆ ಅನುಗುಣವಾಗಿ 5–6 ವಿದ್ಯಾರ್ಥಿಗಳ ಗುಂಪು ಮಾಡಿ ಗುಂಪಿನಲ್ಲಿ ಕುಳಿತುಕೊಳ್ಳಲು ತಿಳಿಸಿ.
- ಮೇಲಿನ ಪ್ರಶ್ನೆಗಳ ಕಾರ್ಡ್‌ನ್ನು ಪ್ರತಿ ಗುಂಪಿಗೆ ನೀಡಿ
- ಮೇಲಿನ ಪ್ರತಿಯೊಂದು ಸಂದರ್ಭಗಳಲ್ಲಿ ರಸ್ತೆ ಬಳಸಲು ತಾವು ಮಾಡಬಹುದಾದ 5–6 ಸುರಕ್ಷಿತ ಚಟುವಟಿಕೆಗಳನ್ನು ಪಟ್ಟಿ ಮಾಡಲು ತಿಳಿಸಿ.
- ಕೊಟ್ಟಿರುವ ಪ್ರಶ್ನೆ ಕುರಿತು ಪಟ್ಟಿ ಮಾಡಲು ಪ್ರತಿ ಗುಂಪಿಗೂ ಇಪ್ಪತ್ತು ನಿಮಿಷ ಕಾಲಾವಕಾಶ ನೀಡಿ.
- ನಂತರದ 20 ನಿಮಿಷಗಳಲ್ಲಿ ತಮ್ಮ ವಿಚಾರಗಳನ್ನು ಹಂಚಿಕೊಳ್ಳಲು ಪ್ರತಿ ಗುಂಪಿಗೂ ತಿಳಿಸುವುದು.
- ಮುಂದಿನ 20 ನಿಮಿಷಗಳನ್ನು ರಸ್ತೆ ನಿಯಮಗಳನ್ನು ಪಾಲಿಸುವ ಅವಶ್ಯಕತೆಗಳ ಕುರಿತು ಸಾರಾಂಶಿಸಲು ತಿಳಿಸುವುದು.

ಅನುಭವ :

ತರಗತಿ 6–8 : (60 ನಿಮಿಷಗಳು)

# ಸನ್ನಿವೇಶಗಳನ್ನು ಕಲ್ಪಿಸಿಕೊಂಡು ನಟಿಸೋಣ !

## ರಸ್ತೆಯು ಕಣವಲ್ಲ

ಮಾಧವ ಎಂಬ ರೈತನೊಬ್ಬನು ಬೆಳೆ ಕಟಾವಿನ ನಂತರ ಕಣ ಮಾಡಲು ಹೆಚ್ಚು ಹಣ ಖರ್ಚಾಗುವುದೆಂದು ಭಾವಿಸಿ, ತನ್ನ ಹಳ್ಳಿಯಲ್ಲಿ ಹೆಚ್ಚಿನ ಸಂಚಾರವಿರುವ ರಸ್ತೆಯಲ್ಲಿ ತೆನೆಯನ್ನು ಹರಡಿ ಕಣ ಮಾಡೋಣ ಎಂದು ಹೆಂಡತಿಯ ಬಳಿ ಹೇಳುತ್ತಾನೆ. ಆಕೆ ರಸ್ತೆಯಲ್ಲಿ ತೆನೆ ಹರಡುವುದು ಸರಿಯಲ್ಲ ಹಾಗಾಗಿ ಬೇಡ ಎಂಬುದಾಗಿ ತಿಳಿ ಹೇಳುತ್ತಾಳೆ. ಹೆಂಡತಿಯ ಮಾತನ್ನು ಗಣನೆಗೆ ತೆಗೆದುಕೊಳ್ಳದ ರೈತ, ಮರುದಿನ ಮುಂಜಾನೆ ರಸ್ತೆಯಲ್ಲಿ ತೆನೆಗಳನ್ನು ಹರಡುತ್ತಾನೆ. ಆ ದಿನ ನಗರದಲ್ಲಿ ಓದುತ್ತಿರುವ ಅವರ ಮಗ ಅದೇ ದಾರಿಯಲ್ಲಿ ತನ್ನ ಮನೆಗೆ ದ್ವಿಚಕ್ರ ವಾಹನದಲ್ಲಿ ಬರುತ್ತಾನೆ. ಕಣದ ಮೇಲೆ ವಾಹನವನ್ನು ಚಲಾಯಿಸುವಾಗ ಆಯ ತಪ್ಪಿ ಜಾರಿಬಿದ್ದು ತೀವ್ರವಾಗಿ ಗಾಯಗೊಂಡು ಆಸ್ಪತ್ರೆ ಸೇರುತ್ತಾನೆ. ತನ್ನ ಮಗನ ದುಸ್ಥಿತಿಗೆ ತಾನೇ ಕಾರಣ ಎಂದು ತಿಳಿದು ಮಾಧವ ತೀವ್ರ ಪಶ್ಚಾತ್ತಾಪಪಡುತ್ತಾನೆ. ಅಂದಿನಿಂದ ತನ್ನ ಹಳ್ಳಿಯಲ್ಲಿ ರಸ್ತೆಯ ಮೇಲೆ ಯಾರೂ ಕಣಗಳನ್ನು ಹರಡಬಾರದೆಂದು ಎಲ್ಲರಿಗೂ ತಿಳಿ ಹೇಳುತ್ತಾನೆ.

## ನಿರ್ಲಕ್ಷ್ಯಕ್ಕೆ ತೆತ್ತ ಬೆಲೆ

ರವಿ ಎಂಬ ಯುವಕ ತನ್ನ ಹಳ್ಳಿಯಲ್ಲಿ ವಾಸಿಸುತ್ತಿದ್ದನು. ಒಮ್ಮೆ ಊರಿನ ಗ್ರಾಮಸ್ಥರು ಆ ಊರಿನ ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚಿಸುವ ಬಗ್ಗೆ ಕ್ರಮ ಕೈಗೊಳ್ಳಲು ಪತ್ರ ಬರೆಯುವಂತೆ ರವಿಗೆ ಹೇಳಿದರು. ಆದರೆ ರವಿ ಉದಾಸೀನ ತೋರಿ, ಆ ಕೆಲಸವನ್ನು ಮುಂದೂಡುತ್ತಿರುತ್ತಾನೆ. ಹೀಗೆ ಒಮ್ಮೆ ಮಳೆಗಾಲದಲ್ಲಿ ಆ ಗುಂಡಿಗಳಲ್ಲಿ ನೀರು ತುಂಬಿ ರಸ್ತೆ ಕಾಣದಿದ್ದಾಗ ರವಿ ಆ ರಸ್ತೆಯಲ್ಲೇ ಸೈಕಲ್‌ನಲ್ಲಿ ಹೊಲದಿಂದ ಮನೆಗೆ ಬರುವ ಸಂದರ್ಭದಲ್ಲಿ ಆತನಿಗೆ ಬಿದ್ದು ಗಾಯಗಳಾಗುತ್ತವೆ. ಆನಂತರ ಪಶ್ಚಾತ್ತಾಪಗೊಂಡ ರವಿ ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರ ಬರೆದು ದುರಸ್ತಿಗೊಳಿಸಲು ಮನವಿ ಮಾಡುತ್ತಾನೆ.

## ಹೆಲ್ಮೆಟ್ ಧರಿಸಿ ಜೀವ ಉಳಿಸಿ

ಮುನಿಯ, ಬಾಲು ಹಾಗೂ ರಾಜು ಎಂಬ ಪ್ರೌಢಶಾಲೆಯ ವಿದ್ಯಾರ್ಥಿಗಳು ಸ್ನೇಹಿತರಾಗಿದ್ದರು. ಇವರಿಗೆ ಬೈಕ್ ಸವಾರಿ ಎಂದರೆ ಬಹಳ ಅಚ್ಚು ಮೆಚ್ಚು. ಇನ್ನೂ ಅಪ್ರಾಪ್ತರಾದ ಕಾರಣ ಯಾರು ಸಹ ಇವರಿಗೆ ವಾಹನ ನೀಡುತ್ತಿರಲಿಲ್ಲ. ಒಮ್ಮೆ ಮುನಿಯನ ಮನೆಗೆ ತನ್ನ ದೂರದ ಊರಿನಿಂದ ಮಾವನು ಬೈಕಿನಲ್ಲಿ ಬಂದಿರುತ್ತಾನೆ. ಮುನಿಯ ಮಾವನನ್ನು ಬೇಡಿಕೊಂಡು ಬೈಕನ್ನು ಸಂತೆಗೆ ತೆಗೆದುಕೊಂಡು ಹೋಗಲು ನಿರ್ಧರಿಸುತ್ತಾನೆ. ತನ್ನ ಗೆಳೆಯರಿಗೆ ಬೈಕನ್ನು ತೋರಿಸಿದ ಮುನಿಯ ನಿಯಮ ಉಲ್ಲಂಘಿಸಿ



'ಬುದ್ಧಿ ಇಲ್ಲದವನ ಐಶ್ವರ್ಯ, ಕಡಿವಾಣ ಇಲ್ಲದ ಕುದುರೆಯಂತೆ'

ಹೆಲ್ಮೆಟ್‌ನ್ನೂ ಧರಿಸದೇ ಮೂವರು ಒಂದೇ ಗಾಡಿಯಲ್ಲಿ ಹತ್ತಿ ವೇಗವಾಗಿ ವಾಹನ ಚಲಾಯಿಸುತ್ತಾರೆ. ಈ ಸಂದರ್ಭದಲ್ಲಿ ಅಪಘಾತವಾಗಿ ರಾಜುವಿನ ತಲೆಗೆ ಪೆಟ್ಟುಬಿದ್ದು, ತೀವ್ರ ರಕ್ತಸ್ರಾವವಾಗಿ ಆಸ್ಪತ್ರೆ ಸೇರುತ್ತಾನೆ. ಉಳಿದವರಿಗೆ ಗಾಯಗಳಾಗುತ್ತವೆ. ಆ ನಂತರ ಮುನಿಯ ಮತ್ತು ಆತನ ಗೆಳೆಯರು ಹಿರಿಯರ ಮಾತುಗಳನ್ನು ಕೇಳದೇ ಆದ ಅವಘಡಕ್ಕೆ ಪಶ್ಚಾತ್ತಾಪ ಪಡುತ್ತಾರೆ.

## ರಸ್ತೆಯ ಅವೈಜ್ಞಾನಿಕ ಉಬ್ಬುಗಳು

ಮುಖ್ಯರಸ್ತೆಗೆ ಹೊಂದಿಕೊಂಡಂತೆ ಇದ್ದ ಒಂದು ಊರಿನಲ್ಲಿ ಗ್ರಾಮಸ್ಥರು ರಸ್ತೆಯ ಡಾಂಬರೀಕರಣದ ವೇಳೆ ನಿಯಮ ಉಲ್ಲಂಘಿಸಿ ವಾಹನಗಳ ವೇಗ ನಿಯಂತ್ರಣಕ್ಕೆ ಅವೈಜ್ಞಾನಿಕವಾಗಿ ಉಬ್ಬುಗಳನ್ನು ನಿರ್ಮಿಸುವರು. ರಾಮಪ್ಪ ಹಾಗು ಮಂಜಪ್ಪ ರಸ್ತೆಯ ನಿಯಮಗಳನ್ನು ಉಲ್ಲಂಘಿಸಿ ರಾಮಪ್ಪನು ತನ್ನ ಮನೆಗೆ ನೀರು ಬರುವಂತೆ ಮಾಡಲು  ಹಾಗೂ ಮಂಜಪ್ಪನು ತಮ್ಮ ಮನೆಗೆ ಡ್ರೈನೇಜ್ ಸಂಪರ್ಕ ಕಲ್ಪಿಸಲು ಅನುಕೂಲವಾಗುವಂತೆ ರಸ್ತೆಯ ಮಧ್ಯೆ ಅಗೆದು, ಅವುಗಳನ್ನು ಸರಿಯಾಗಿ ಮುಚ್ಚದೇ ಹಾಗೆಯೇ ಬಿಡುತ್ತಾರೆ. ಆದರೆ ಮುಖ್ಯರಸ್ತೆಯಲ್ಲಿ ಓಡಾಡುವಾಗ ಹೊರ ಊರಿನ ಪ್ರಯಾಣಿಕರಿಗೆ ಇದರ ಮಾಹಿತಿ ಇಲ್ಲದೆ, ದಿನಕ್ಕೆ ನಾಲ್ಕರಿಂದ ಐದು ಅಪಘಾತಗಳು ಸಂಭವಿಸಿ ಸಾವು ನೋವುಗಳಾಗಿರುತ್ತವೆ. ಇದನ್ನು ಕಂಡ ಶಾಲಾ ಮಕ್ಕಳು ಗ್ರಾಮಸ್ಥರಿಗೆ ತಿಳುವಳಿಕೆ ನೀಡುತ್ತಾರೆ.

## ಜಾಣ ರಮೇಶ

ಅವನ ಅತ್ತೆಯ ಮನೆಗೆ ಡಬ್ಬಿ ಕಳಿಸಲು ಅಮ್ಮ ರಮೇಶನನ್ನು ಕರೆದು ನೀಡುತ್ತಾಳೆ. ದಾರಿಯಲ್ಲಿ ಹೋಗುವಾಗ ಸ್ನೇಹಿತ ರಾಮ ಸಿಗುತ್ತಾನೆ. ಇಬ್ಬರು ಮಾತಾಡಿಕೊಳ್ಳುತ್ತಾ ಹೋಗುವಾಗ ಟ್ರಾಫಿಕ್‌ನಲ್ಲಿ ಕೆಂಪು ದೀಪ ನೋಡಿ ನಿಲ್ಲುವ ರಮೇಶನು ರಾಮನಿಗೆ ಅದರ ಮಹತ್ವವನ್ನು ತಿಳಿಸುತ್ತಾನೆ.  ಆದರೆ ರಾಮನು ಅವನ ಮಾತುಗಳನ್ನು ಕೇಳದೆ ಮುಂದೆ ಹೋಗುತ್ತಾನೆ. ಎದುರಿನಿಂದ ಬರುತ್ತಿದ್ದ ವಾಹನಕ್ಕೆ ಸಿಕ್ಕಿ ರಾಮನು ಕೆಳಗೆ ಬೀಳುತ್ತಾನೆ. ಅಲ್ಲಿ ಅಪಘಾತವಾಗಿ ಅನಂತರ ಪಶ್ಚಾತ್ತಾಪ ಪಡುತ್ತಾನೆ.

## ಹಳ್ಳಿ ರಸ್ತೆ ಬದಿಯಲ್ಲಿ ಹಸು-ಕುರಿಗಳನ್ನು ಮೇಯಿಸುವುದು

ರಾಮಕ್ಕ ಎಂಬ ಹೆಂಗಸು ಪಕ್ಕದ ಮನೆಯ ಜಯಮ್ಮ ಎಂಬುವಳೊಂದಿಗೆ ತನ್ನ ಹಸು ಕುರಿಗಳನ್ನು ಮತ್ತು ಜಯಮ್ಮಳ ಐದು ಹಸುಗಳೊಂದಿಗೆ ಮೇಯಿಸಲು ಪ್ರತಿದಿನ ಹೋಗುತ್ತಿರುತ್ತಾಳೆ. ರಸ್ತೆ ಬದಿಗಳಲ್ಲಿ ಯಥೇಚ್ಚವಾಗಿ ಹುಲ್ಲು ಬೆಳೆದಿರುತ್ತದೆ. ಅದು ಸಾರ್ವಜನಿಕ ಸ್ಥಳವಾದ ಕಾರಣ ಅಲ್ಲೇ ತಮ್ಮ ಹಸು-ಕುರಿಗಳನ್ನು ಮೇಯಿಸುತ್ತಿರುತ್ತಾರೆ. ಒಮ್ಮೆ ಹಸು ಕುರಿಗಳು ಮೇಯುತ್ತಿರುವಾಗ ಒಂದು ಹಾಲಿನ ಲಾರಿಯು ವೇಗವಾಗಿ ಬಂದು ಹಸು-ಕುರಿಗಳು ರಸ್ತೆಗೆ ಅಡ್ಡಲಾಗಿ ಬಂದ ಕಾರಣ ಚಾಲಕನ ನಿಯಂತ್ರಣ ತಪ್ಪಿ ಅವುಗಳ ಮೇಲೆ ಹರಿಸುತ್ತಾನೆ. ಮನೆಗೆ ಆಧಾರವಾಗಿದ್ದ ಹಸು ಕುರಿಗಳನ್ನು ಕಳೆದುಕೊಂಡ ಜಯಮ್ಮ ಹಾಗು ರಾಮಕ್ಕ ದುಃಖಿತರಾಗುತ್ತಾರೆ. ತಾವು ರಸ್ತೆಯ ಮೇಲೆ ಜಾನುವಾರುಗಳನ್ನು ಮೇಯಲು

ಬಿಟ್ಟದ್ದು ತಪ್ಪು ಎಂಬ ಅರಿವು ಉಂಟಾಗುತ್ತದೆ ಮತ್ತು ತಮ್ಮ ವಿವೇಚನಾ ರಹಿತ ಕೆಲಸಕ್ಕಾಗಿ ಪಶ್ಚಾತ್ತಾಪಪಡುತ್ತಾರೆ.

### ಸೆಲ್ಫಿಗಳ ಹುಚ್ಚು

ಕುಮಾರ ಎಂಬ ಯುವಕ ತನ್ನ ಗೆಳೆಯರೊಡನೆ ರಜೆಯ ಮಸ್ತಿಗಾಗಿ ಮುಖ್ಯ ರಸ್ತೆಯಲ್ಲಿ ವ್ಹೀಲ್ಲಿಂಗ್ ಮಾಡುತ್ತಾ ಅದರ ಸೆಲ್ಫಿ ಹಾಗೂ ವೀಡಿಯೋ ತೆಗೆಯುತ್ತಿರುವ ಸಂದರ್ಭದಲ್ಲಿ ನಿಯಂತ್ರಣ ತಪ್ಪಿ ಇತರೆ ವಾಹನಕ್ಕೆ ಡಿಕ್ಕಿ ಹೊಡೆದು ನೆಲಕ್ಕುರುಳಿ ರಕ್ತಸ್ರಾವದಿಂದ ಬಳಲುತ್ತಾ ಸಹಾಯಕ್ಕೆ ಅಂಗಲಾಚುತ್ತಾನೆ. ಅಲ್ಲಿ ನೆರೆದ ಜನರು ಮಾನವೀಯತೆಯನ್ನು ಮರೆತು ಆ ದೃಶ್ಯಗಳನ್ನು ಸೆರೆಹಿಡಿಯುವುದರಲ್ಲಿ ಮಗ್ನರಾಗಿರುತ್ತಾರೆ. ಅಲ್ಲಿಗೆ ಬಂದ ಶಿಕ್ಷಕರೊಬ್ಬರು ಇದನ್ನು ಖಂಡಿಸಿ ಬೇಕಾದ ಪ್ರಥಮ ಚಿಕಿತ್ಸೆಯನ್ನು ಮಾಡಿ, ಜನರಿಗೆ ತಿಳಿ ಹೇಳುವರು.

**ನಿರೂಪಕ/ನಾಯಕರಿಗೆ ಸೂಚನೆಗಳು :**

- ಕನಿಷ್ಟ 4–5 ವಿದ್ಯಾರ್ಥಿಗಳು ಇರುವಂತೆ ಒಂದೊಂದು ತಂಡಗಳನ್ನು ರಚಿಸಿ.
- ಪ್ರತಿ ತಂಡಕ್ಕೆ ಒಂದು ವಿಷಯವನ್ನು ಕೊಟ್ಟು ಪಾತ್ರ ಅಭಿನಯ ಮಾಡಲು ಹೇಳಬೇಕು. ತಿಳಿಸಿ
- ಪಾತ್ರ ಪ್ರದರ್ಶನಕ್ಕೆ 15 ನಿಮಿಷ ಮುಂಚಿತವಾಗಿ ಕೆಲವು ನಿರ್ದಿಷ್ಟ ಪ್ರಶ್ನೆಗಳ ಕುರಿತು ಚರ್ಚಿಸಿ.
- ಚಟುವಟಿಕೆಗೆ ಸಿದ್ಧವಾಗಲು ಪ್ರತಿ ತಂಡಕ್ಕೂ 15 ನಿಮಿಷಗಳ ಕಾಲಾವಕಾಶ ನೀಡಿ ಪಾತ್ರ ಪ್ರದರ್ಶನಕ್ಕೆ 5 ನಿಮಿಷದ ಕಾಲಾವಕಾಶ ಕೊಡಿ.

ಮಕ್ಕಳು ಕಥೆಯನ್ನು ಹೇಗೆ ಹೆಣೆಯಬೇಕು ಎಂದು ಮಾರ್ಗದರ್ಶನ ನೀಡಿ. ಪ್ರತಿ ತಂಡಕ್ಕೂ ಪಾತ್ರ ಪ್ರದರ್ಶನ ಮಾಡಲು 5 ನಿಮಿಷ ಕಾಲಾವಕಾಶ ಒದಗಿಸಿ. ಅವರು ಕಥೆಗಳನ್ನು ಹೆಣೆಯಲು ಕೆಲವು ಆಯ್ಕೆಗಳನ್ನು ನೀಡಿ. ಅಂದರೆ..... ಶಾಲೆ/ಶಿಕ್ಷಕರು/ ಪೋಷಕರು ಏನು ಮಾಡುವರು? ಈ ಸಂದರ್ಭದಲ್ಲಿ ಸಹಪಾಠಿಗಳ ಪಾತ್ರ ಏನು?

ಈ ರೀತಿಯ ಪ್ರಶ್ನೆಗಳನ್ನು ಪಾತ್ರ ಪ್ರದರ್ಶನ ಚಟುವಟಿಕೆಯ ಪೂರ್ವಾವಧಿಯಲ್ಲಿ ಮಕ್ಕಳಿಗೆ ಕೇಳಬೇಕು. ತದನಂತರ ಚಟುವಟಿಕೆಯನ್ನು ಆರಂಭಿಸಬೇಕು. ಚಟುವಟಿಕೆ ಮುಗಿದ ನಂತರ ಪ್ರಶ್ನೆಗಳನ್ನು ಕೇಳಿ. ಕಿರಿಯ ವಿದ್ಯಾರ್ಥಿಗಳು ಪ್ರದರ್ಶನದ ಬಗ್ಗೆ ಪ್ರಶ್ನೆಗಳನ್ನು ಕೇಳಲು ಇಚ್ಛಿಸಿದರೆ ಅವಕಾಶ ಕೊಡಿ.

ಅವಲೋಕನ :

ತರಗತಿ 6–8 : **ಸಂದೇಹ ಪರಿಹರಿಸಿಕೊಳ್ಳೋಣವೇ ?**

**ನೀವು ಶಾಲೆಗೆ ಅಥವಾ ಸ್ನೇಹಿತರ ಮನೆಗೆ ಹೋಗುವಾಗ ಇಂತಹ ಸನ್ನಿವೇಶಗಳು ಎದುರಾದರೆ ಏನು ಮಾಡುವಿರಿ?**

| ನಿಯಮ | ನನ್ನ ಸಂದೇಹ | ಏನು ಮಾಡಬೇಕು? |
|---|---|---|
| **ಯಾವಾಗಲೂ ಕಾಲುದಾರಿಯಲ್ಲಿ ನಡೆಯಬೇಕು.** | ಕಾಲುದಾರಿ ಇಲ್ಲದಿದ್ದರೆ ಏನು ಮಾಡಬೇಕು? | |
| **ಜೀಬ್ರಾ ಪಟ್ಟಿ, ಸಬ್ ವೇ ಅಥವಾ ಮೇಲ್ಸೇತುವೆಗಳನ್ನು ಬಳಸಿ ರಸ್ತೆಯನ್ನು ದಾಟಬೇಕು.** | ಯಾವುದೂ ಇಲ್ಲದಿದ್ದರೆ ಏನು ಮಾಡಬೇಕು? | |
| **ರಸ್ತೆಯಲ್ಲಿ ವಾಹನಗಳಿದ್ದರೆ ಚಾಲಕನು ನೀವು ದಾಟುತ್ತಿರುವುದನ್ನು ನೋಡಿರುವುದನ್ನು ಖಾತ್ರಿಪಡಿಸಿಕೊಂಡು ದಾಟುವುದು.** | ಹೇಗೆ ಖಾತ್ರಿ ಪಡಿಸಿಕೊಳ್ಳುವುದು? | |
| **ರಸ್ತೆ ದಾಟುವಾಗ ಕಣ್ಣು ಮತ್ತು ಕಿವಿಗಳು ಜಾಗೃತವಾಗಿರಬೇಕು.** | ಹಾಡುಗಳನ್ನು ಕೇಳಬಹುದಾ? ಆ ಬದಿಯಲ್ಲಿರುವ ಸ್ನೇಹಿತರನ್ನು ಮಾತನಾಡಿಸಬಹುದಾ? | |
| **ನಿಂತಿರುವ ಬಸ್/ಕಾರ್‌ನ ಮುಂದೆ ಅಥವಾ ಹಿಂದೆ ನಡೆಯಬಾರದು.** | ವಾಹನವು ನಿಂತಿರುವಾಗ ಮಧ್ಯದ ಜಾಗದಲ್ಲಿ ನಾನೇಕೆ ನಡೆಯಬಾರದು? | |
| **ಅಪಘಾತಗಳ ಸಂದರ್ಭದಲ್ಲಿ ಸಾಧ್ಯವಾದರೆ ಪ್ರಥಮ ಚಿಕಿತ್ಸೆಯನ್ನು ಮಾಡುವುದು.** | ಪ್ರಥಮ ಚಿಕಿತ್ಸೆ ಸಾಧನವಿಲ್ಲದಿದ್ದರೆ ಏನು ಮಾಡಬೇಕು? | |
| **ಅಪ್ರಾಪ್ತ ಮಕ್ಕಳು ವಾಹನವನ್ನು ಚಾಲನೆ ಮಾಡಬಾರದು.** | ಆದರೆ ನಾನು ಅಪ್ರಾಪ್ತನಾದರೂ ವಾಹನವನ್ನು ಚೆನ್ನಾಗಿ ಓಡಿಸಬಲ್ಲೆ. ಏಕೆ ಚಾಲನೆ ಮಾಡಬಾರದು? | |
| **ರಸ್ತೆ ಬದಿಯಲ್ಲಿ ಸಾಕು ಪ್ರಾಣಿಗಳನ್ನು ಮೇಯಲು/ಓಡಾಡಲು ಬಿಡಬಾರದು.** | ಹಳ್ಳಿಗಳಲ್ಲಿ ವಾಹನಗಳ ದಟ್ಟಣೆ ಕಡಿಮೆ ಇರುವುದರಿಂದ ಏಕೆ ಬಿಡಬಾರದು? | |

| ನಿಯಮ | ನನ್ನ ಸಂದೇಹ | ಏನು ಮಾಡಬೇಕು? |
|---|---|---|
| **ರಸ್ತೆಗಳಲ್ಲಿ ಗುಂಡಿಗಳನ್ನು ಮುಚ್ಚಬೇಕು.** | ನಮ್ಮ ಶಾಲೆಯ ಬಳಿ ರಸ್ತೆಯ ಮೇಲೆ ಗುಂಡಿಗಳಿದ್ದರೂ ನಾವು ಮುಚ್ಚಲು ಸಾಧ್ಯವಿಲ್ಲ. ಅದು ನನ್ನ ಕೆಲಸವಲ್ಲ. | |
| **ರಸ್ತೆಯ ಮೇಲೆ ಕೃಷಿ ಚಟುವಟಿಕೆಗಳನ್ನು ಮಾಡಬಾರದು.** | ಹಳ್ಳಿಗಳಲ್ಲಿ ವಾಹನಗಳ ದಟ್ಟಣೆ ಕಡಿಮೆ ಇರುವುದರಿಂದ ಏಕೆ ಮಾಡಬಾರದು? | |

**ನಿರೂಪಕ/ನಾಯಕರಿಗೆ ಸೂಚನೆಗಳು :**

- ಪ್ರತಿಯೊಬ್ಬ ವಿದ್ಯಾರ್ಥಿಗೂ ಒಂದೊಂದು ಚಟುವಟಿಕೆ ಹಾಳೆ ನೀಡುವುದು.
- ಹಾಳೆಗಳನ್ನು ನೀಡಿದ ಮೇಲೆ ವಿದ್ಯಾರ್ಥಿಗಳನ್ನು ಇಬ್ಬರಂತೆ ಗುಂಪು ಮಾಡುವುದು.
- ಗುಂಪಿನಲ್ಲಿರುವ ವಿದ್ಯಾರ್ಥಿಗಳಿಗೆ ತಮ್ಮಲ್ಲಿರುವ ಚಟುವಟಿಕೆ ಹಾಳೆಗಳನ್ನು ಪೂರ್ಣಗೊಳಿಸಲು ತಿಳಿಸುವುದು.
- ಮಕ್ಕಳು ಗುಂಪಿನಲ್ಲಿ ಈ ಕೆಳಕಂಡ ಪ್ರಶ್ನೆಗಳನ್ನು ಚರ್ಚಿಸಲು ಹೇಳುವುದು.
- ನೀನು ಈ ಆಯ್ಕೆಯನ್ನೇ ಏಕೆ ಆರಿಸಿದೆ?
- ನಿನ್ನ ಆಯ್ಕೆಯಿಂದ ರಸ್ತೆ ಅಪಘಾತಗಳನ್ನು ತಪ್ಪಿಸಬಹುದೇ? ಹೇಗೆ?
- ಗುಂಪುಗಳಿಗೆ ಅವರ ಆಯ್ಕೆ ಹಿಂದಿರುವ ಕಾರಣವನ್ನು ವಿವರಿಸಲು ತಿಳಿಸುವುದು.
- ಪೂರ್ಣಗೊಳಿಸಿದ ಚಟುವಟಿಕೆ ಹಾಳೆ ಬಳಸಿ ರಸ್ತೆ ಸುರಕ್ಷತೆಗೆ ಸಂಬಂಧಿಸಿದಂತೆ ಕೆಲವು ಸೌಕರ್ಯಗಳ ಲಭ್ಯತೆ ಇಲ್ಲದಿದ್ದರೂ ಏನು ಮುಂಜಾಗ್ರತಾ ಕ್ರಮ ಕೈಗೊಳ್ಳಬಹುದು ಎಂಬುದರ ಬಗ್ಗೆ ಚರ್ಚಿಸುವುದು.
- ವಿದ್ಯಾರ್ಥಿಗಳನ್ನು ಅವರ ಗುಂಪಿನೊಂದಿಗೆ 15–20 ನಿಮಿಷಗಳು ಚರ್ಚಿಸಲು ತಿಳಿಸುವುದು, ವಿದ್ಯಾರ್ಥಿಗಳಿಗೆ ತಮಗೆ ಆದಂತಹ ಸ್ವಂತ ಅನುಭವಗಳನ್ನು ಹಂಚಿಕೊಳ್ಳುವಂತೆ ಮಾರ್ಗದರ್ಶಿಸುವುದು.

ಈಗ ಪ್ರತಿಜ್ಞೆಯನ್ನು ಮಾಡುವ ಸಮಯ



## ಪ್ರತಿಜ್ಞೆ

- ಭಾರತ ನನ್ನ ದೇಶ, ಎಲ್ಲಾ ಭಾರತೀಯರು ನನ್ನ ಸಹೋದರ ಸಹೋದರಿಯರು.
- ಇಲ್ಲಿನ ರಸ್ತೆಯ ನಿಯಮಗಳಿಗೆ ನಾನು ಬದ್ಧನಾಗಿರುತ್ತೇನೆ. ನನ್ನ ಸುರಕ್ಷಿತ ಜೀವನಕ್ಕೆ ನಾನೇ ಹೊಣೆಯಾಗಿರುತ್ತೇನೆ.
- ಇಲ್ಲಿ ನಾನು ಬದುಕಿ ಸಕಲ ಜೀವರಾಶಿಗಳನ್ನು ಬದುಕಲು ಬಿಡುತ್ತೇನೆ. ಇಲ್ಲಿನ ಸುರಕ್ಷತಾ ನಿಯಮಗಳನ್ನು ಚಾಚು ತಪ್ಪದೆ ಪಾಲಿಸಿ, ಈ ದೇಶದ ಪ್ರಜ್ಞಾವಂತ ಪ್ರಜೆಯಾಗಿ ನಾನು ನನ್ನ ಜವಾಬ್ದಾರಿಯನ್ನು ನಿರ್ವಹಿಸುತ್ತೇನೆ ಎಂದು ಭಾರತ ಮಾತೆಯನ್ನು ಮನದಲ್ಲಿ ನೆನೆದು ಪ್ರಮಾಣೀಕರಿಸುತ್ತೇನೆ.
- ಇಂದು ನಾವು ಅರಿತುಕೊಂಡಿರುವ ವಿಷಯವನ್ನು ನನ್ನ ಸಹಪಾಠಿಗಳು, ಶಾಲೆಯ ಹೊರಗಿನ ಸ್ನೇಹಿತರು, ನೆರೆಹೊರೆಯವರು ಮತ್ತು ನಮ್ಮ ಕುಟುಂಬದ ಎಲ್ಲಾ ಸದಸ್ಯರೊಂದಿಗೆ ಹಂಚಿಕೊಂಡು ಈ ಪ್ರತಿಜ್ಞಾ ವಿಧಿಯನ್ನು ತಿಳಿಸಿ, ಅವರು ಕೂಡ ತಮ್ಮ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಲು ವಿನಂತಿಸಿಕೊಳ್ಳುತ್ತೇನೆ.

## ಸಲಹಾತ್ಮಕ ಚಟುವಟಿಕೆಗಳು

ರಸ್ತೆ ಅಪಘಾತಗಳ ಕುರಿತು ಮಕ್ಕಳಿಗೆ ಅರಿವು ಮೂಡಿಸಲು ವಿವಿಧ ಇಲಾಖೆಗಳು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ಜೊತೆಗೆ ಶಾಲಾ ಪಠ್ಯಕ್ರಮದಲ್ಲಿಯೂ ಪಾಠಗಳನ್ನು ಅಳವಡಿಸಿದೆ. ಈ ಚಟುವಟಿಗೆಗೆ ಪೂರಕವಾಗಿ ಯೋಜನಾ ಕಾರ್ಯಗಳನ್ನು ನಿರ್ವಹಿಸಲು ವಿದ್ಯಾರ್ಥಿಗಳಿಗೆ ಸೂಚಿಸುವುದು. ಕೆಲವು ಉದಾಹರಣೆಗಳನ್ನು ನೀಡಿದೆ:

- ಮಕ್ಕಳಿಗೆ ರಸ್ತೆ ಸುರಕ್ಷತೆಯ ಕುರಿತು ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಿ, ಉತ್ತಮ ಚಿತ್ರಗಳನ್ನು ತರಗತಿ ಕೋಣೆಯಲ್ಲಿ /ಶಾಲೆಯಲ್ಲಿ ಪ್ರದರ್ಶಿಸುವುದು.
- ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಪೊಲೀಸ್ ಇಲಾಖೆಯಿಂದ ನಡೆಸುವ "ರಸ್ತೆ ಸುರಕ್ಷತಾ ಸಪ್ತಾಹ"ದ ಮಹತ್ವವನ್ನು ತಿಳಿಸಲು ಕಾರ್ಯಕ್ರಮ ಆಯೋಜಿಸುವುದು.
- ಸ್ಥಳೀಯ ಪೊಲೀಸರಿಂದ ರಸ್ತೆ ಸುರಕ್ಷತಾ ಕ್ರಮಗಳ ಕುರಿತು ಸಂವಾದಗಳನ್ನು ಶಾಲಾ ಆವರಣದಲ್ಲಿ ಏರ್ಪಡಿಸುವುದು.
- ಮಕ್ಕಳು ತಮ್ಮ ಸುತ್ತಮುತ್ತಲಿನ ಜನರಿಗೂ ಸಹ ಈ ಅಧಿವೇಶನದಿಂದ ಕಲಿತ ನೀತಿಗಳನ್ನು ತಿಳಿಹೇಳುವ ಮೂಲಕ ಸಮಾಜಕ್ಕೆ ಉತ್ತಮ ಪ್ರಜೆಗಳಾಗಬೇಕು.